

# ನಡೆದಾಡುವ ಕಡ್ಡಿ!

**ಇಲ್ಲಿದೆ ನಡೆದಾಡುವ ಕಡ್ಡಿಯ ವಿಸ್ಮಯ ಲೋಕ! ಇವುಗಳ ಮೀಸೆಯೇ ಮೂಗು. ನಾಲಿಗೆ ಪಾದದಲ್ಲಿದೆ!**

■ ಚಿತ್ರ–ಲೇಖನ:

**ಪುಟ್ಟರಾಜು ಕೆ.**

ಕೈಗಾ ವಸತಿ ಸಂಕೀರ್ಣಕ್ಕೆ ಹಿನ್ನೆಲೆ ಚಿತ್ರದಂತೆ ಅತ್ಯಂತ ಸುಂದರವಾಗಿ ಹಸಿರಿನಿಂದ ಕಂಗೊಳಿಸುತ್ತಾ ನಿಂತಿದೆ ಶಿರ್ವೆ ಗುಡ್ಡ. ಕಾರವಾರ ತಾಲ್ಲೂಕಿನಲ್ಲಿಯೇ ಅತೀ ಎತ್ತರದ ಗುಡ್ಡವೆಂದು ಇದು ಪ್ರಸಿದ್ಧಿ. ಸಾಧಾರಣ ಒಂದು ಸಾವಿರ ಅಡಿಗಳ ಎತ್ತರವಿರುವ ಈ ಗುಡ್ಡದಿಂದ ಹಳ್ಳವೊಂದು ವರ್ಷವಿಡೀ ಹರಿದು ಕಾಳೀ ನದಿ ಸೇರುತ್ತದೆ. ಈ ಹಳ್ಳದ ದಂಡೆಯಲ್ಲಿ ಏಷ್ಯನ್ ಪ್ಯಾರಡೈಸ್ ಪ್ಲೇ ಕ್ಯಾಚರ್ ಎಂಬ ಸುಮಾರು 50 ಸೆಂ.ಮೀ. ಉದ್ದ ಬಾಲವಿರುವ ಪಕ್ಷಿಯ ವೀಕ್ಷಣೆಗೆಂದು ಕಾದು ಕುಳಿತಿದ್ದೆ.

ಅದು ಬಿದಿರ ಮೆಳೆಯಲ್ಲಿ ಗೂಡು ಕಟ್ಟುವ ಹಕ್ಕಿ. ಯಾವುದಾದರೂ ಬೇಟೆಯ ವಾಸನೆ ಮೂಗಿಗೆ ಬಡಿದರೆ ಬೇಟೆನಾಯಿ ಹೇಗೆ ಏಕಾಗ್ರಚಿತ್ತದಿಂದ ಬೇಟೆಯ ಜಾಡನ್ನು ಅರಸುವುದರಲ್ಲಿ ಮಗ್ನವಾಗುವುದೋ ಅಂತೆಯೇ ನಮ್ಮ ಮೈ ಮನಸೂ ಇತ್ತು. ಅಷ್ಟರಲ್ಲಿ ರಾಜೇಶ್ 'ಸರ್! ಇಲ್ಲಿ ನೋಡಿ 'ವಿಚಿತ್ರ ಹುಳು' ಎಂದ.

ಸ್ವಲ್ಪ ಅಸಡ್ಡೆಯಿಂದಲೇ ತಿರುಗಿ ನೋಡಿದರೆ, ಪಕ್ಕದ ಬಿದಿರ ಮೆಳೆಯಲ್ಲಿ ಕಡ್ಡಿಗೆ ಕಾಲು ಬಂದು ನಡಿಗೆ ಶುರು ಮಾಡಿದಂತೆ ಕಾಣುತ್ತಿದ್ದ ದೃಶ್ಯ! ಹಕ್ಕಿಯ ಗೋಜು ಬಿಟ್ಟು ಪಕ್ಕದಲ್ಲೇ ಇದ್ದ ಬಿದಿರ ಮೆಳೆಗೆ ಮುಗಿಬಿದ್ದೆ. ದೈನಂದಿನ ಪಕ್ಷಿ ವೀಕ್ಷಣೆ ಸಮಯದಲ್ಲಿ ನಾವು ಸಾಧಾರಣವಾಗಿ ಪ್ರಾಣಿ ಪಕ್ಷಿಗಳಿಗೆ ಕೊಡುವಷ್ಟು ಗಮನ ಈ ಹುಳು ಹುಪ್ಪಟಗಳಿಗೆ ಕೊಡುವುದಿಲ್ಲ.

ಪ್ರಕೃತಿಯಲ್ಲಿ ಮಾರುವೇಷದ ವಿಲಕ್ಷಣ ವೈಪರೀತ್ಯಗಳ ಸಾವಿರಾರು ರಹಸ್ಯಗಳಿವೆ. ಈ ರಹಸ್ಯಗಳು ನಮ್ಮ ಊಹೆಗೂ ನಿಲುಕದಷ್ಟು ನಿಗೂಢ. ನಮ್ಮ ದೃಷ್ಟಿಗೆ ಕಂಡದ್ದು ಬೆರಳೆಣಿಕೆಯಷ್ಟು ಮಾತ್ರ. ನಮ್ಮ ಗಮನಕ್ಕೆ ಬಾರದ ಅಸಂಖ್ಯ ಜೀವಿಗಳ ಬಗ್ಗೆ ವಿವರಗಳು ತಿಳಿದಾಗ ಅದ್ಭುತ ಎನ್ನಿಸುತ್ತದೆ. ಅಂತಹ ಅದ್ಭುತಗಳಲ್ಲಿ ಈ ಕಡ್ಡಿ ಹುಳುವೂ ಒಂದು.

ಜೀವಿಗಳಲ್ಲಿಯೇ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಕೀಟಗಳ ಮಧ್ಯೆ ಆಹಾರಕ್ಕೂ ವಾಸಸ್ಥಳಕ್ಕೂ ತೀವ್ರ ಪೈಪೋಟಿ ಇದೆ. ಅವು ತಮ್ಮನ್ನು, ತಮ್ಮ ವಾಸ ಸ್ಥಳವನ್ನು ಇತರ ಕೀಟ, ಪ್ರಾಣಿ–ಪಕ್ಷಿಗಳ

(8ನೇ ಪುಟ ನೋಡಿ)